ಅಂಕಿ ಸಂಖ್ಯೆಗಳಿವೆ. ಒಟ್ಟಾರೆ ಹೋಲಿಕೆ ಮಾಡಿ ನೋಡಿದಾಗ ಬಹಳ ಕಡಿಮೆಯಿದೆ. ಅವರು ಎಲ್ಲಿ ಇದ್ದಾರೆಂದು ನಾನು ನೋಡುತ್ತಿದ್ದೆ, ಅವರು ವಯಸ್ಕರ ಶಿಕ್ಷಣ ಇಲಾಖೆಯಲ್ಲಿ ಇದ್ದಾರೆ ಅದು ನಮ್ಮ ಇಲಾಖೆಯ ಭಾಗ ಅಲ್ಲಿಯೇ 4–8 ಜನ ಇದ್ದಾರೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಎರಡು ಜನರು ಇದ್ದಾರೆ.

ಶ್ರೀ ಹೆಚ್.ಎಸ್. ಪ್ರಕಾಶ್ :– ಎರಡು ಜನ ಅಲ್ಲ ಸಾರ್, ತಾವು ಒಂದು ಕೆಲಸ ಮಾಡಿ ಅವರನ್ನು ಅಲ್ಲಿ absorb ಮಾಡುವಂಥದ್ದು ನಡೆಯುತ್ತಿದೆ. ದಯಮಾಡಿ ತಾವು ಸ್ವಲ್ಪ ಕೇಳಿ, ರಾಜಕೀಯದಲ್ಲಿ ಇಚ್ಛಾಶಕ್ತಿ ಬಳಸುತ್ತಾರೆ. ಸಮಾಜದಲ್ಲಿ ಲೆಕ್ಚರರ್‌ರವರಿಗೆ ಅಪಾರವಾದ ಗೌರವವಿದೆ. ಆ ಕೆಲಸ ಬಿಟ್ಟು ಸಮಾಜ ಕಲ್ಯಾಣ ಇಲಾಖೆಗೆ ಹೋಗುತ್ತಾರೆಂದರೆ ಅವರು ಏನು ಕಾರಣಕ್ಕೆ ಹೋಗುತ್ತಾರೆ ? ಏಕೆ ಹೋಗಬೇಕು ? ಸಾಮಾನ್ಯವಾಗಿ ನನಗೆ ನಮ್ಮ ಗುರುಗಳಿಗೆ ನಮಗೆ ಪಾಠ ಹೇಳಿಕೊಟ್ಟ ಲೆಕ್ಚರರ್‌ರವರಿಗೆ ಭಾರಿ ಅಪಾರವಾದ ಗೌರವವನ್ನು ನಾವು ಇವತ್ತಿಗೂ ಕೊಡುತ್ತಿದ್ದೇವೆ ಮತ್ತು ಹಿಂದೆಯೂ ಕೂಡ ಕೊಟ್ಟಿದ್ದೇವೆ. ಅಂಥ ಕೆಲಸ ಬಿಟ್ಟು ಅವರು ಹೋಗುತ್ತಾರೆಂದರೆ ಅವರ ಉದ್ದೇಶ ಏನು ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಈಗ ಕೋರ್ಟ್ ಆದೇಶಗಳಿವೆ, ಇವರನ್ನು ಹಿಂದಕ್ಕೆ ತರಸಿಕೊಳ್ಳುವುದಕ್ಕೆ ಬೇಕಾಗಿರುವಂಥ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು :– ಈಗ ಸದನವನ್ನು ನಾಳೆ ಬೆಳಗ್ಗೆ 10–00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 8 ಗಂಟೆ 51 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 26–07–2012 ರಂದು ಗುರುವಾರ ಬೆಳಗ್ಗೆ 10–00 ಗಂಟೆಗೆ ಸಭೆ ಸೇರುವಂತೆ ನಿಶ್ಚಯಿಸಿತು)

ಪಶುಸಂಗೋಪನೆ ಇಲಾಖೆ ಪುನರಚನೆ

274 (171) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್). :– ಮಾನ್ಯ ಪಶುಸಂಗೋಪನೆ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿರುವ ಜಾನುವಾರುಗಳ ಸರಾಸರಿ ಸಂಖ್ಯೆ ಎಷ್ಟು ;

ಆ) ಜಾನುವಾರುಗಳನ್ನೇ ಅವಲಂಬಿಸಿರುವ ಕುಟುಂಬಗಳೆಷ್ಟು ;

ಇ) ಪಶುಸಂಗೋಪನಾ ಇಲಾಖೆಯನ್ನು ಯಾವಾಗ ಕೃಷಿ ಇಲಾಖೆಯಿಂದ ಪ್ರತ್ಯೇಕಿಸಲಾಯಿತು ;

ಈ) ಈ ಪಶುಸಂಗೋಪನೆ ಇಲಾಖೆ ಪುನಾರಚನೆ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

ಉ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಪಶುಸಂಗೋಪನೆ ಸಚಿವರು) :-

ಅ) 3,28,83,251.

ಆ) 61,68,875.

ಇ) 1945ನೇ ಸಾಲಿನಲ್ಲಿ.

ಈ) ಹೌದು.

ಉ) 2011-12ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಇಲಾಖೆಯ ಪುನರ್ ರಚನೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪಿಸಿದ್ದು. ಈ ಪ್ರಸ್ತಾವನೆ ಪರಿಶೀಲನೆಗಾಗಿ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ 10 ಸದಸ್ಯರನ್ನೊಳಗೊಂಡ ಉನ್ನತಾಧಿಕಾರಿಗಳ ಸಮಿತಿಯನ್ನು ದಿನಾಂಕ : 28-05-2011 ರಂದು ರಚಿಸಲಾಗಿದೆ. ಹಾಗೂ ಇಲಾಖೆಯಿಂದ ಸಲ್ಲಿಸಿದ ಪ್ರಸ್ತಾವನೆಯನ್ನು ಸಮಿತಿಯು ಕೂಲಂಕುಷವಾಗಿ ಪರಿಶೀಲಿಸಿ ಸೆಪ್ಟೆಂಬರ್ 2011 ರಂದು ಶಿಫಾರಸ್ಸಿನೊಂದಿಗೆ ಸಭೆಯ ನಡವಳಿಯನ್ನು ಸರ್ಕಾರಕ್ಕೆ ಮಂಡಿಸಿದೆ. ಪ್ರಸ್ತುತ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಅಂಗನವಾಡಿಗಳಿಗೆ ಸ್ವಂತ ಕಟ್ಟಡ

300 (727) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) :- ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಗೌರಿಬಿದನೂರು ತಾಲ್ಲೂಕಿನ ಸುಮಾರು 150 ಅಂಗನವಾಡಿಗಳಿಗೆ ಸ್ವಂತ